ಪಡೆದುಕೊಳ್ಳುವುದು ಬಹಳ ತೊಂದರೆಯಾಗುತ್ತದೆ. ಅದನ್ನು ತಾಲ್ಲೂಕು ಮಟ್ಟಕ್ಕೆ ತಂದು ಭೂ ದಾಖಲೆಗಳು ರೈತರಿಗೆ ಸುಲಲಿತವಾಗಿ ಸಿಗುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ರಾಜಶೇಖರಮೂರ್ತಿ : ಕೆಲವು ಕಡೆ ನಾಡ ಕಛೇರಿಗಳು ಎಂದು ಇದೆ. ಹಾಸನ ಜಿಲ್ಲೆಯೊಳಗೆ ವಾರಕ್ಕೆ ಒಂದು ದಿವಸ ನಾಡ ಕಛೇರಿಗೆ ಹೋಗಬೇಕು. ಹೋಬಳಿ ಹೆಡ್ ಕ್ವಾರ್ಟರ್ಸ್‌ಗೆ ಹೋಗಬೇಕು. ರೈತರು ಕೇಳಿದಾಗ ದಾಖಲಾತಿಗಳನ್ನು ಅವರು ಒದಗಿಸಿ ಕೊಡಬೇಕು. ಆ ಒಂದು ಏರ್ಪಾಡನ್ನು ಮಾಡಿದ್ದೇವೆ.

ಶ್ರೀ ಎ. ಟಿ. ರಾಮಸ್ವಾಮಿ : ನಾನು ಕೇಳಿದ್ದುದು ಲ್ಯಾಂಡ್ ರಿಕಾರ್ಡ್ಸ್ ಸರ್ವೆಗೆ ಸಂಬಂಧಪಟ್ಟಂತೆ ಲ್ಯಾಂಡ್ ರಿಕಾರ್ಡ್ಸ್‌ಗಳು ಸಬ್-ಡಿವಿಜನ್ ಆಫೀಸ್‌ನಲ್ಲಿ ಮಾತ್ರ ಸಿಗುವುದು. ಅದನ್ನು ತಾವು ತಾಲ್ಲೂಕು ಮಟ್ಟಕ್ಕೆ ತರುತ್ತೀರಾ? ರೈತರು ಬಹಳ ದೂರ ಅಲೆಯುವುದನ್ನು ತಪ್ಪಿಸುತ್ತೀರಾ?

ಶ್ರೀ ಎಂ. ರಾಜಶೇಖರಮೂರ್ತಿ : ಅದು ಹೊಸ ಸಲಹೆ ಬಂದಿದೆ. ಅದನ್ನು ಆಲೋಚನೆ ಮಾಡುತ್ತೇನೆ.

<u>ವಿಷಯ : ಚಾಮರಾಜನಗರ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿರುವ ವೃದ್ಧಾಪ್ಯ ವೇತನದಾರರು.</u>

1401

ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಅನಧಿಕೃತವಾಗಿ ವೃದ್ಧಾಪ್ಯ ವೇತನ ಪಡೆಯುತ್ತಿರುವವರನ್ನು ಪತ್ತೇ ಹಚ್ಚಲು ಪ್ರತಿಯೊಂದು ಹಳ್ಳಿಗಳಲ್ಲೂ ವೃದ್ಧಾಪ್ಯ ವೇತನವನ್ನು ಪಡೆಯುತ್ತಿರುವವರ ಪಟ್ಟಿಯನ್ನು ತಯಾರಿಸಿ ಅದನ್ನು ಸಂಬಂಧಪಟ್ಟ ಮಂಡಲ ಪಂಚಾಯಿತಿಗಳಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಇಡಲು ಚಾಮರಾಜನಗರ ಮತ್ತು ನಂಜನಗೂಡು ತಹಶೀಲ್ದಾರರಿಗೆ ಸರ್ಕಾರವು ಸೂಚನೆಗಳನ್ನು ನೀಡುವುದೇ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) :

ಅ) ಇಲ್ಲ.

ಶ್ರೀ ಕೆ. ಸಿದ್ದಯ್ಯ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಈ ವೃದ್ಧಾಪ್ಯ ವೇತನದವರು ಅನೇಕ ತಪ್ಪು ಮಾಹಿತಿಗಳನ್ನು ಕೊಟ್ಟು ಕಳ್ಳತನದಲ್ಲಿ ಸರ್ಕಾರಕ್ಕೆ ಮೋಸ ಮಾಡಿ ಹೊಡೆಯುತ್ತಿದ್ದಾರೆ. ಇದನ್ನು ಪತ್ತೆ ಹಚ್ಚುವುದಕ್ಕೆ ನೀವು ಆಯಾ ಮಂಡಲಗಳಿಗೆ ಕಳುಹಿಸಬೇಕು ಎಂದು ಹೇಳಿದರೆ ಕಳುಹಿಸುವುದಕ್ಕಾಗುವುದಿಲ್ಲ ಎಂದು ಹೇಳಿದ್ದೀರಿ. ಇದಕ್ಕೆ ಕಾರಣವನ್ನು ತಿಳಿಸುತ್ತೀರಾ ಸ್ವಾಮಿ.

ಶ್ರೀ ಎಂ. ರಾಜಶೇಖರಮೂರ್ತಿ(ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮಂಡಲಗಳಿಗೆ ಕಳುಹಿಸಿ ಅದನ್ನು ಭಾವಡಿಯೊಳಗೂ ಎಲ್ಲೋ ಪಬ್ಲಿಷ್ ಮಾಡಿದರೆ ಅದರ ಬಗ್ಗೆ ಕೆಲವರು ಅಬ್ಜೆಕ್ಷನ್ಸ್ ಆ ಊರಿನಲ್ಲಿ ಹಾಕಬಹುದು. ಅಂದರೆ ಗ್ರಾಮಗಳಲ್ಲಿ ಪಾರ್ಟಿಯಾಗಿ

ಶಾಂತಿಭಂಗವಾಗುತ್ತದೆ ಎಂದು ನಾವು ಆ ಮಾರ್ಗ ತಪ್ಪಿಸಿ ಸ್ಪೆಷಲ್ ಡ್ರೈವ್ ಎಂದು ಇಲಾಖೆಯವರೇ ತೆಗೆದುಕೊಳ್ಳುತ್ತಿದಾರೆ. ಚಾಮರಾಜನಗರದ ಸ್ವಲ್ಪ ಭಾಗ, ನಂಜನಗೂಡಿನಲ್ಲಿ ಸ್ವಲ್ಪ ಭಾಗ ಎರಡು ಭಾಗ ಸೇರಿ ಅವರದು ಕ್ಷೇತ್ರವಾಗಿದೆ. ಆ ಎರಡು ಭಾಗಗಳು ಒಂದೇ ಕ್ಷೇತ್ರವಾಗಿರುವಾಗ ಎರಡು ಭಾಗ ಸೇರಿ ಕೆಲವು ಕಡೆಗೆ ಈ ಡ್ರೈವ್ ಮಾಡಿ, ನಂಜನಗೂಡು ತಾಲ್ಲೂಕಿನಲ್ಲಿ ಸುಮಾರು 6483 ಫಲಾನುಭವಿಗಳಿದ್ದಾರೆಂದು ಗುರುತಿಸಿದ್ದಾರೆ. ಈ ಹಿಂದೆ ಚಾಮರಾಜನಗರ ತಾಲ್ಲೂಕಿನಲ್ಲಿ ವೇತನ ಮಂಜೂರಾತಿ ನಂತರ ವಿಚಾರಣೆ ಮಾಡಿ ನಂತರ ಕಂಡು ಬಂದ 5893 ಫಲಾನುಭವಿಗಳಿಗೆ ವೇತನಕ್ಕೆ ಅನರ್ಹರೆಂದು ವೇತನವನ್ನು ವಜಾ ಮಾಡಲಾಗಿದೆ. ಎಲ್ಲೆಲ್ಲಿ ಆ ರೀತಿಯ ಬೋಗಸ್ ಪೆನ್‌ಶನ್ ಕೊಟ್ಟಿದ್ದಾರೆ, ಅಲ್ಲಿ ಒಂದು ಡ್ರೈವ್ ತೆಗೆದುಕೊಂಡು ಬೋಗಸ್ ಎಂದು ಗೊತ್ತಾದರೆ ಅದನ್ನೂ ವಜಾ ಮಾಡುತ್ತೇವೆ.

ಶ್ರೀ ಕೆ. ಸಿದ್ದಯ್ಯ : ಮಾನ್ಯ ಅಧ್ಯಕ್ಷರೇ, ಒಂದು ವೇಳೆ ಸ್ಪೆಷಲ್ ಡ್ರೈವ್ ಮಾಡುವುದಕ್ಕಿಂತ ಬದಲಾಗಿ ಈಗ ಸೀಮೆ ಎಣ್ಣೆ ಮತ್ತು ಆಹಾರ ಪದಾರ್ಥಗಳ ಕಾರ್ಡುದಾರರು ಬೇಕಾದಷ್ಟು ಇದ್ದಾರೆ. ಬೇನಾಮಿ ಕಾರ್ಡುಗಳು ಇವೆ ಎಂದು ಹೇಳಿ ಮತ್ತೆ ಫ್ರೆಷ್ ಡಿಕ್ಲರೇಷನ್ ಯಾವ ರೀತಿ ಕೊಡಿಸಿದ್ದಾರೋ ಅದೇ ರೀತಿ ಈಗ ಇರತಕ್ಕಂಥವರಿಗೆ ಮತ್ತೆ ಫ್ರೆಷ್ ಡಿಕ್ಲರೇಷನ್ ಮಾಡಿಸಿ, ಏನಾದರೂ ಪತ್ತೆ ಹಚ್ಚುವುದನ್ನು ಮಾಡುತ್ತೀರಾ? ಈ ರೀತಿ ಮಾಡುವುದರಿಂದ, ನಿಜವಾಗಿಯೂ ಅನುಕೂಲಸ್ಥರಾಗಿರತಕ್ಕಂಥವರು ಯಾರು ಪಡೆಯುತ್ತಿದ್ದಾರೆ, ಅವರನ್ನು ತಪ್ಪಿಸಿ ಕೊನೆಯ ಪಕ್ಷ ಈ ಬಡವರ ಮಕ್ಕಳಿಗೆ ಪಾಪ ಅವರು ತಂದೆತಾಯಿಗಳಿಗೆ ಊಟ ಹಾಕುವುದಿಲ್ಲ. ಅಂಥವರಿಗಾದರೂ ಈ ವೃದ್ಧಾಪ್ಯವೇತನ ಸಿಕ್ಕಲಿ, ಅದನ್ನಾದರೂ ಫ್ರೆಶ್ ರೀತಿಯಲ್ಲಿ ಕೊಡುವ ಹಾಗೆ ಮಾಡಿಸುತ್ತೀರಾ?

ಶ್ರೀ ಎಂ. ರಾಜಶೇಖರಮೂರ್ತಿ : ಕೆಲವು ಕಡೆ ಒ.ಎ.ಪಿ. ಮಾಡುವಾಗ ಶಿಫಾರಸ್ ಮೇಲೆ ಮಾಡಿರಬಹುದು. ತಪ್ಪುಗಳು ಆಗಿದೆ. ಅದನ್ನು ರಿವೈಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗಾಗಲೇ ನಾನು ಜಿಲ್ಲಾಧಿಕಾರಿಗಳಿಗೆ ಒಂದು ಸ್ಪೆಷಲ್ ಡ್ರೈವ್ ಮಾಡುವುದಕ್ಕೆ ಹೇಳಿದ್ದೇನೆ. ಎಲ್ಲೆಲ್ಲಿ ಅವ್ಯವಹಾರಗಳು ಈ ರೀತಿ ನಡೆದಿವೆ ಅವುಗಳನ್ನು ಸರಿಪಡಿಸಬೇಕೆಂದು ಹೇಳಿದ್ದೇನೆ, ಅದನ್ನು ಮಾಡುತ್ತೇನೆ.

ಶ್ರೀ ಕೆ. ಸಿದ್ದಯ್ಯ : ನಾನು ಕೇಳತಕ್ಕ ಪ್ರಶ್ನೆ ಬಹಳ ಇಂಪಾರ್ಟೆಂಟ್. ಏಕೆಂದರೆ ಸಾರ್ವಜನಿಕರ ದುಡ್ಡು ಅನ್ಯಾಯವಾಗಿ ಮೋಸಗಾರನಿಗೆ ಜಾಸ್ತಿ ಸಿಗುತ್ತದೆ. ಫ್ರೆಶ್ ಆಗಿ ಡಿಕ್ಲರೇಶನ್ ಮಾಡುವುದಕ್ಕೆ ತೊಂದರೆ ಏನು ? ಸೀಮೆ ಎಣ್ಣೆಗೆಲ್ಲಾ ಕೊಡಿಸಿರಿ. ಆಹಾರ ಧಾನ್ಯಗಳಿಗೆಲ್ಲಾ ಫ್ರೆಶ್ ಆಗಿ ಕೊಡಿರಿ, ಬೇಕಾದಷ್ಟು ಬೇನಾಮಿದಾರರು ಇದ್ದಾರೆ. ಅವರನ್ನೆಲ್ಲಾ ಕಿತ್ತು ಹಾಕುವಂತೆ ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ಮಾಡುತ್ತೀರಾ? ಇದಕ್ಕೂ ಅದೇ ರೀತಿ ಮಾಡುವುದಕ್ಕೆ ತೊಂದರೆ ಏನು? ಸರ್ಕಾರಕ್ಕೆ ಲಾಭ ಉಂಟು. ಈ ಮೋಸಗಾರರನ್ನು ಪತ್ತೆ ಹಚ್ಚಬಹುದು. ಕೊನೆಯ ಪಕ್ಷ ಬಡವರು ಏನೇನೂ ದಿಕ್ಕಿಲ್ಲದ ತಂದೆ ತಾಯಿಯಂದಿರಿಗೆ ಕೊಡಿ. ಅವರಿಗೆ ಮಕ್ಕಳಿದ್ದರೆ ಕೊಡಲ್ಲ ಎಂದು ಹೇಳುತ್ತೀರಿ. ಅಷ್ಟಾದರೂ ಏಕೆ ಮಾಡಬಾರದು?

ಶ್ರೀ ಎಂ. ರಾಜಶೇಖರಮೂರ್ತಿ : ಅವರ ಪ್ರಶ್ನೆಗೆ ಈಗಾಗಲೇ ಉತ್ತರ ಹೇಳಿದ್ದೇನೆ. ಅವರು ಏನು ಹೇಳುತ್ತಾರೆ ಎಂದರೆ ಅನೇಕ ಕಡೆ ಅವ್ಯವಹಾರವಾಗಿ ಯಾರಿಗೆ ಸಲ್ಲಬಾರದಿತ್ತು, ಅವರಿಗೆ ಸಂದಿದೆ ಎಂದು ಹೇಳುತ್ತಾರೆ. ಅದಕ್ಕೋಸ್ಕರ ನಾನು ಹೇಳಿದೆ. ನಂಜನಗೂಡು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ನಂಜನಗೂಡು ತಾಲ್ಲೂಕಿನಲ್ಲಿ 5893 ಫಲಾನುಭವಿಗಳ ವೇತನವನ್ನು ವಜಾ ಮಾಡಿದ್ದೇವೆ. ಚಾಮರಾಜನಗರ ಪೋರ್ಷನ್‌ನಲ್ಲಿ, ನಂಜನಗೂಡು ಪೋರ್ಷನ್‌ನಲ್ಲಿ 672 ಮಂದಿ ವೇತನವನ್ನು ವಜಾ ಮಾಡಿದ್ದೇವೆ. ಎರಡೂ ಕಡೆ ಮಾಡಿದ್ದೇವೆ.

ಅಧ್ಯಕ್ಷರು : ಶ್ರೀ ಬಸವಗೌಡ ತಮ್ಮ ಪ್ರಶ್ನೆಯನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾಗಿದೆ. ಅದು ಬಂದನಂತರ ತೆಗೆದುಕೊಳ್ಳೋಣ.

ವಿಷಯ : ರಾಜ್ಯದಲ್ಲಿನ ಆಸ್ತಿ ಅಪಮೌಲ್ಯ ಪ್ರಕರಣಗಳು

124

ಶ್ರೀ ಕೆ. ರವೀಂದ್ರನಾಥ ಬಾಬು (ಕೊಪ್ಪಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಂಡು ಹಿಡಿದ ಆಸ್ತಿ ಅಪಮೌಲ್ಯಗೊಳಿಸಿದ ಪ್ರಕರಣಗಳು ಎಷ್ಟು?
ಆ) ಬೆಲೆ ನಿಗದಿಪಡಿಸಿ ಎಷ್ಟು ಜನರಿಗೆ ನೋಟೀಸ್ ನೀಡಲಾಗಿದೆ?
ಇ) ಪ್ರತಿ ಪ್ರಕರಣಗಳಲ್ಲಿ ವಸೂಲಾದ ಒಟ್ಟು ಮೊತ್ತ ಎಷ್ಟು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) 13,043
(1991 -92 ನೇ ಸಾಲಿಗೆ)
ಆ) ಎಲ್ಲಾ 13,043 ಪ್ರಕರಣಗಳಲ್ಲೂ.
ಇ) ಪ್ರತಿ ಪ್ರಕರಣದ ಬಗ್ಗೆ ಮಾಹಿತಿಯು ಸದ್ಯಕ್ಕೆ ಲಭ್ಯವಿಲ್ಲ. ತೀರ್ಮಾನವಾಗಿರುವ 8,462 ಪ್ರಕರಣಗಳಿಂದ 9.35 ಕೋಟಿ ರೂ.ಗಳು ವಸೂಲಾಗಬೇಕಾಗಿದ್ದು, ಅದರಲ್ಲಿ 3.45 ಕೋಟಿ ರೂ.ಗಳನ್ನು ವಸೂಲು ಮಾಡಿದೆ. ಇನ್ನು 5.90 ಕೊಟಿ ರೂ.ಗಳನ್ನು ವಸೂಲು ಮಾಡಬೇಕಾಗಿದೆ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ 1991-92ನೇ ಸಾಲಿಗೆ ಕಂಡುಹಿಡಿದ ಆಸ್ತಿ ಅಪಮೌಲ್ಯಗೊಳಿಸಿದ ಪ್ರಕರಣಗಳು 13,043 ಎಂದು ಉತ್ತರ ಕೊಟ್ಟಿದ್ದಾರೆ. ಅದು ಟೋಟಲ್ ಅಮೌಂಟ್ 9 ಕೋಟಿ 35 ಲಕ್ಷ ರೂಪಾಯಿಗಳು ವಸೂಲಾಗಬೇಕಾಗಿದ್ದು, ಅದರಲ್ಲಿ 3.45 ಕೋಟಿ ರೂಪಾಯಿಗಳನ್ನು ವಸೂಲು ಮಾಡಿದೆ ಎಂದು ಹೇಳಿದ್ದಾರೆ. ಇನ್ನು 5.90 ಕೋಟಿ ರೂಪಾಯಿಗಳನ್ನು ವಸೂಲು ಮಾಡಬೇಕಾಗಿದೆ ಎಂದು ಉತ್ತರದಲ್ಲಿದೆ. ಇದರಲ್ಲಿ ಸ್ವಲ್ಪ ಮಿಸ್‌ಚೀಫ್ ಆಗುತ್ತಿದೆ ಎಂದು ನನಗೆ ತಿಳಿದು ಬಂದಿದೆ. ನೋಟೀಸ್ ಕೊಡುತ್ತಾರೆ. 50, 60 ಸಾವಿರ ರೂಪಾಯಿಗೆ ನಿಮ್ಮದು ಅಂಡರ್‌ವ್ಯಾಲ್ಯು ಆಗಿದೆ. ಇಷ್ಟು ಹಣ ಕಟ್ಟಬೇಕು ಎಂದು ಹೇಳುತ್ತಾರೆ. ರಿಜಿಸ್ಟರ್ ಮಾಡಿಸಿಕೊಂಡು ಇಷ್ಟು ಹಣ ಕಟ್ಟಬೇಕು ಎಂದು ಹೇಳುತ್ತಾರೆ. ಅಲ್ಲಿಗೆ ಬಂದ ಮೇಲೆ ಅದೇನು ಕಾಂಪ್ರಮೈಸ್ ಆಗುತ್ತದೆಯೋ , ಏನೋ ಗೊತ್ತಿಲ್ಲ, 25 ಸಾವಿರ ರೂಪಾಯಿಗೆ ಮತ್ತೆ ರಿಜಿಸ್ಟರ್ ಮಾಡಿ ಮತ್ತೆ ಅವರನ್ನು ವಾಪಸ್ ಕಳಿಸುತ್ತಾರೆ, ಇದು ಏಕೆ? ನೋಟೀಸ್ ಕೊಡುವುದು ಒಂದು ಅಮೌಂಟ್‌ಗೆ., ಅದು ಯಾವ ಬೇಸಿಸ್ ಮೇಲೆ ಕ್ಯಾಲ್‌ಕ್ಯುಲೇಟ್ ಮಾಡುತ್ತಾರೆ. ಬಂದ ಮೇಲೆ ರಿಜಿಸ್ಟರ್ ಆಗುವುದೇ ಒಂದು ಫಿಗರ್‌ಗೆ. ಇದು ಏಕೆ ಹೀಗೆ ಆಗುತ್ತಿದೆ ಎಂದು ನಮಗೆ ಅರ್ಥ ಆಗುತ್ತಾ ಇಲ್ಲ. ಇದು ಎಲ್ಲಾ ಜಿಲ್ಲೆಯಲ್ಲೂ ಬಹಳ ಆಗಿದೆ. ಇದು ಏಕೆ ಹೀಗೆ ಆಗುತ್ತಿದೆ, ಎನ್ನುವುದನ್ನು ತಿಳಿಸಬೇಕು.

Sri. M. RajaShekaramurthy : The suggestion will be examined and action will be taken to prevent the malpractices.